





ಒಂದು ಪ್ರಭೇದವೇ ಖಗರತ್ನ (ಪರ್ಪಲ್ ರಪ್ಡ್ ಸನ್‌ಬರ್ಡ್). ಪ್ರಾಣಿಶಾಸ್ತ್ರೀಯವಾಗಿ 'ಲೆಪ್ಟೊಕೊಮ ಜೈಲೊನಿಕ' ಎಂದು ಕರೆಯಲ್ಪಡುವ ಈ ಹಕ್ಕಿ ಗುಬ್ಬಿಗಿಂತ ಚಿಕ್ಕದು. ಗಂಡು ಹಕ್ಕಿಯ ತಲೆ, ಕುತ್ತಿಗೆ, ಎದೆ ಮತ್ತು ಬೆನ್ನು ಲೋಹದಂತೆ ಹೊಳೆಯುವ ಗಾಢ ಕಂದು ಮಿಶ್ರಿತ ನೇರಳೆ ಬಣ್ಣ ಹೊಂದಿರುತ್ತವೆ. ದೇಹದ ಕೆಳಭಾಗ ಮತ್ತು ನೆತ್ತಿ ಹೊಳೆಯುವ ಹಸಿರು ಮಿಶ್ರಿತ ಕಪ್ಪು. ಹೊಟ್ಟೆ ಹಳದಿ ಬಣ್ಣದ್ದಾಗಿರುತ್ತದೆ. ಹೆಣ್ಣು ಹಕ್ಕಿಯ ಮೇಲ್ಮೈ ತಿಳಿ ಕಂದುಬಣ್ಣದಿಂದ ಕೂಡಿದ್ದು ಕುತ್ತಿಗೆ ಮತ್ತು ಎದೆ ಬಿಳಿಯದ್ದಾಗಿರುತ್ತದೆ. ಹೊಟ್ಟೆ ಮಾಸಲು ಹಳದಿ ಬಣ್ಣವಿದೆ.

ಈ ಹಕ್ಕಿಗಳು ಮರಗಿಡಗಳಲ್ಲಿ, ಹೂತೋಟಗಳಲ್ಲಿ ಲವಲವಿಕೆಯಿಂದ ಗಿಡದಿಂದ ಗಿಡಕ್ಕೆ ಹಾರುತ್ತಾ, ನಿಂತಲ್ಲಿ ನಿಲ್ಲದೆ ಹೂವಿನ ಮಕರಂದವನ್ನು ಹೀರುತ್ತವೆ. ಹೂವಿನ ಮಧುವೇ ಇವುಗಳಿಗೆ ಮುಖ್ಯ ಆಹಾರ. ಸಣ್ಣಗೆ ತುಸು ಬಾಗಿದ ಚೂಪಾದ ಕೊಕ್ಕು ಮತ್ತು ಉದ್ದವಾದ ದಾರದಂತಹ ನಾಲಿಗೆ ಹೂವಿನಿಂದ ಮಕರಂದ ಹೀರಲು ಅನುಕೂಲಕರವಾಗಿದೆ.

ಸೂರಕ್ಕಿಗಳ ಪ್ರಭೇದಗಳಲ್ಲಿ ಆಹಾರ ಒದಗಿಸುವ ಹೂಗಳ ಆಕಾರಕ್ಕೆ ತಕ್ಕಂತೆ ಕೊಕ್ಕು ಮಾರ್ಪಾಡಾಗಿದೆ. ದೊಡ್ಡ ಹೂವಾದಲ್ಲಿ, ಬುಡದಲ್ಲಿ ಕೊಕ್ಕಿನಿಂದ ರಂಧ್ರ ಮಾಡಿ ಮಧುವನ್ನು ನೆಕ್ಕುತ್ತವೆ. ಉತ್ಸಾಹದ ಚಟುವಟಿಕೆಗೆ ಅಗತ್ಯವಾದ ಶಕ್ತಿಗೆ ಸಕ್ಕರೆಯುಕ್ತ ಹೂವಿನ ಮಕರಂದವೇ ಪೂರಕ ಆಹಾರ. ಉಳಿದಂತೆ ಪ್ರೊಟೀನ್‌ಗಾಗಿ ಜೇಡ ಮತ್ತು ಸಣ್ಣ ಹುಳುಗಳನ್ನು ಸಹ ತಿನ್ನುತ್ತವೆ.

ಆಗಾಗ್ಗೆ ಟಿಟ್ಯೂ... ಟಿಟ್ಯೂ... ಟ್ರಿರ್–ರ್–ರಿಟಿಟ್ ಎಂಬಂತಹ ತೀಕ್ಷ್ಣ ಉತ್ತೇಜಿತ ಕೂಗು ಹೊರಡಿಸುತ್ತವೆ. ಯಾವಾಗಲೂ 'ಸಂತೋಷಕೆ ಹಾಡು ಸಂತೋಷಕೆ' ಎಂಬಂತಹ ಜೀವನ ಇವುಗಳದ್ದು. ಸಾಮಾನ್ಯವಾಗಿ ಜೊತೆಗಳಲ್ಲಿ ಅಥವಾ ಗುಂಪಿನಲ್ಲಿ ಹೂವಿರುವ ಕಡೆ ಪುರ್ರನೆ ಹಾರಿಬಂದು ಮಧುವನ್ನು ಹೀರಿ ಕ್ಷಣಮಾತ್ರದಲ್ಲಿ ಮಾಯವಾಗುತ್ತವೆ. ಕೆಂಪು ಬಣ್ಣದ ಹೂಗಳಿಂದ ಹೆಚ್ಚಾಗಿ ಆಕರ್ಷಿಸಲ್ಪಡುತ್ತವೆ ಎಂಬುದು ಸಂಶೋಧನೆಯಿಂದ ತಿಳಿದುಬಂದಿದೆ.

ಈ ಹಕ್ಕಿಗಳು ಹೂವಿನ ಮೇಲೆಯೇ ಕುಳಿತು ಮಧು ಹೀರುವ ಪರಿ ನೋಡಲು ಆಹ್ಲಾದಕರ. ಅವುಗಳ ಮಕರಂದ ಅರಸುವ ಪ್ರಕ್ರಿಯೆಯಲ್ಲಿ ಹಲವಾರು ಸಸ್ಯಗಳ ಪರಾಗಸ್ಪರ್ಶ ಕ್ರಿಯೆ ನೆರವೇರಿ ಬೀಜ ಫಲಿತವಾಗುತ್ತವೆ. ಸಮರಸದ ಸಹಜೀವನದ ಸತ್ಯವನ್ನು ಇವು ಮನಗಂಡಿವೆ. ಇವುಗಳ ಜೀವನಕ್ಕೆ ಹೂಗಳು ಬೇಕು. ಸಸ್ಯಗಳ ಪರಾಗಸ್ಪರ್ಶಕ್ಕೆ ಈ ಹಕ್ಕಿಗಳು ಬೇಕು. ಇದಲ್ಲವೇ ನಿನಗೆ ನಾ ನನಗೆ ನೀ ಎಂಬ ಜೀವನ. ನಮ್ಮ ಮನೆಯ ಮುಂದಿನ ಕೈತೋಟದಲ್ಲಿ ಇವುಗಳದ್ದೇ ಪ್ರಾಬಲ್ಯ. ಹೂ ತೋಟವಿದ್ದರೆ ಈ ಹಕ್ಕಿಗಳು ತಮ್ಮ ಇರುವಿಕೆ ಮತ್ತು ಸ್ವರದಿಂದ ವಾತಾವರಣವನ್ನು ಆಹ್ಲಾದಕರವಾಗಿಡುವುವು. ಹೂವಿನೊಂದಿಗೆ ನಗುವ ಹಕ್ಕಿ ಎಷ್ಟು ಚೆಂದ.

ಪ್ರತಿಕ್ರಿಯಿಸಿ: **feedback@sudha.co.in**

